**ದಿನಾಂಕಃ 13-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

3. 7 ಲಕ್ಷ ಮತ್ತು ಚಿಲ್ಲರೆ ಹಣದ ಕುರಿತು ನೋಟಿಸ್ ನೀಡಿದ್ದೇನೆ ಎಂದರೆ ನಿಜ. ನನ್ನ ಬಳಿ ಮೂರು ಚೆಕ್ ಗಳು ಇವೆ ಎಂದರೆ ನಿಜ. ಸದರಿ ಮೂರು ಚೆಕ್ ಗಳನ್ನು ಒಂದೇ ದಿನ ನೀಡಿರುತ್ತಾರೆ. ಸದರಿ ಚೆಕ್ ಗಳ ಮೇಲೆ ದಿನಾಂಕ ಬೇರೆ ಬೇರೆ ಇವೆ. ಇನ್ನೊಂದು ಚೆಕ್ ಕುರಿತು ದೂರು ದಾಖಲಿಸಿದ್ದು ಅದು ನ್ಯಾಯಾಲಯದಲ್ಲಿ ಇದೆ. ಸದರಿ ದೂರನ್ನು ಮರಳಿಸಲಾಗಿದೆ ಎಂದರೆ ನಿಜ. ಸದರಿ ಚೆಕ್ ನ ಕುರಿತು ಕಲಂ 420 ಐ ಪಿ ಸಿ ಅಪರಾಧಕ್ಕೆ ಪ್ರಕರಣ ದಾಖಲಿಸಿದ್ದೇನೆ. ಆ ಪ್ರಕರಣದಲ್ಲಿ ಆರೋಪಿತರಿಗೆ ಸಮನ್ಸ ಜಾರಿ ಆಗಿದೆ. ಸದರಿ ಪ್ರಕರಣದಲ್ಲಿ ಆರೋಪಿತರು ಹಾಜರಾಗಿಲ್ಲ. ಚೆಕ್ ನಲ್ಲಿ ಓವರ್ ರೈಟಿಂಗ್ ಆಗಿದೆ ಎಂದು ಬ್ಯಾಂಕ್ ನವರು ಹೇಳಿರುತ್ತಾರೆ. ಸಾಕ್ಷಿಯು ಮುಂದುವರೆದು ಮೊದಲ ಮೂರು ಬಾರಿ ಫಂಡ್ಸ್ ಇನ್ ಸಫಿಶಿಯಂಟ್ ಎಂಬ ಕಾರಣಕ್ಕೆ ಚೆಕ್ ಅಮಾನ್ಯಗೊಂಡಿತ್ತು ಎಂದರೆ ನುಡಿಯುತ್ತಾರೆ. ಸದರಿ ಚೆಕ್ ನ್ನು ಆರೋಪಿತರು 1 ಲಕ್ಷ 83 ಸಾವಿರದ 348 ರೂಪಾಯಿಗಳಿಗೆ ನೀಡಿದ್ದರು.

4. ಲೆಕ್ಕವನ್ನು ದಿನಾಂಕ 03-07-2018 ರಂದು ಮಾಡಿರುತ್ತೇನೆ. ಆಗ 7,30,274/- ರೂಪಾಯಿ ಲೆಕ್ಕ ಆಗಿತ್ತು. ದಿನಾಂಕ 03-07-2018 ಕ್ಕಿಂತ 2 ವರ್ಷ ಮುಂಚಿನಿಂದಲೂ ಆರೋಪಿತರಿಗೆ ನಾನು ಸರಕು ನೀಡಿದ್ದೇನೆ. ಆರೋಪಿತರು ನನ್ನಿಂದ 11 ಬಾರಿ ವಸ್ತುಗಳನ್ನು ಖರೀದಿಸಿದ್ದಾರೆ. ನಾನು ಆರೋಪಿತರಿಗೆ ಸಾಮುಗ್ರಿ ನೀಡಿದ ಕುರಿತು ಅವರಿಂದ ಯಾವುದೇ ಚೆಕ್ ಅಥವಾ ದಾಖಲೆ ಪಡೆದುಕೊಂಡಿಲ್ಲ. ನಾನು ಆರೋಪಿತರಿಗೆ ಸಾಮುಗ್ರಿ ನೀಡಿದ 11 ಬಿಲ್ ಗಳ ಕುರಿತು ಜಿ ಎಸ್ ಟಿ ಪಾವತಿಸಿದ್ದೇನೆ. ಸಾಕ್ಷಿಯು ಮುಂದುವರೆದು ನಾನು ಆರೋಪಿತರಿಗೆ

ಸಾಮಗ್ರಿಗಳನ್ನು ಉದ್ರಿ ಆಧಾರದ ಮೇಲೆ ನೀಡಿದ್ದೇನೆ ಎಂದು ನುಡಿಯುತ್ತಾರೆ.

5. ನಾನು ಚೆಕ್ ಗಳನ್ನು ನಗದೀಕರಣಕ್ಕೆ ಸಲ್ಲಿಸಿದ ದಿನವೇ ಆರೋಪಿತರು ನನಗೆ ಚೆಕ್ ನೀಡಿದ್ದರು. ನಾನು ಮೂರು ಚೆಕ್ ಗಳನ್ನು ಒಂದೇ ದಿನ ನಗದೀಕರಣಕ್ಕೆ ಸಲ್ಲಿಸಿಲ್ಲ. ಸಾಕ್ಷಿಯು ಮುಂದುವರೆದು ಪೋಸ್ಟ್ ಡೇಟೆಡ್ ಚೆಕ್ ಗಳಾಗಿರುವುದರಿಂದ ಒಂದೇ ದಿನ ನಗದೀಕರಣಕ್ಕೆ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ.2018-19 ರ ಐ ಟಿ ರಿಟರ್ನ್ ಆರೋಪಿತರ ವ್ಯವಹಾರದ ಕುರಿತು ನಮೂದಿಸಿದ್ದೇನೆ. ಸದರಿ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿಲ್ಲ.

6. ಈಗ ನಾನು ನಿಪಿ-19 ನ್ನು ನೋಡುತ್ತಿದ್ದು ಅದು ಕ್ರೆಡಿಟ್ ಬಿಲ್ ಆಗಿರುತ್ತದೆ. ಕ್ಯಾಶ್ ಬಿಲ್ ಬೇರೆ ಇರುತ್ತದೆ. ಕ್ಯಾಶ್ ಬಿಲ್ ನಿಪಿ-19 ಕ್ಕಿಂತ ಚಿಕ್ಕದಾಗಿರುತ್ತದೆ. ಆರೋಪಿತರು

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು .**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.